ಮಕ್ಕಳಿಗಾಗಿ ಬೈಬಲ್
ಅರ್ಪಿಸುವ

# ದೇವರು ಅಬ್ರಹಾಮನ ಪ್ರೀತಿಯನ್ನು ಪರೀಕ್ಷಿಸಿದನು



ಬರಹಗಾರರು: Edward Hughes

ಚಿತ್ರಲೇಖಕರು: Byron Unger; Lazarus
Alastair P.
ಅಳವಡಿಸುವವರು: M. Maillot; Tammy S.

ಪದ್ಮಾ ಸೈಲೇಸ್: Vinay Shirol

ತಯಾರಕರು: Bible for Children
www.M1914.org

©2020 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.


ಒಂದು ರಾತ್ರಿ
ಅಬ್ರಹಾಮನಿಗೆ ದೇವರು
ವಿಚಿತ್ರವಾದ ಆಜ್ಞೆಯನ್ನು
ಮಾಡಿದನು. ಅದೆನೆಂದರೆ
ಅಬ್ರಹಾಮ ತನ್ನ ...


... ಮಗನಾದ ಇಸಾಕನನ್ನು
ದೇವರಿಗಿಂತ ಹೆಚ್ಚಾಗಿ
ಪ್ರೀತಿಸಿದನಾ ಎಂಬುವದನ್ನು
ತಿಳಿದುಕೊಳ್ಳಲು
ಪರಿಶೋಧಿಸಿದನು.


"ನಿನ್ನ ಮಗನಾದ ಇಸಾಕನನ್ನು ಸರ್ವಾಂಗಹೋಮ
ಅರ್ಪಿಸಬೇಕಾಗಿ" ಅಬ್ರಹಾಮನಿಗೆ
ಆಜ್ಞಾಪಿಸಿದನು. ತನ್ನ
ಒಬ್ಬನೆ ಮಗನಾದ
ಇಸಾಕನನ್ನು
ಬಲಿಕೋಡುವನಾ?

ಇಸಾಕನನ್ನು ಹೆಚ್ಚಾಗಿ
ಪ್ರೀತಿಸಿದ್ದರಿಂದ ಈ
ಆಜ್ಞೆಯು
ಅಬ್ರಹಾಮನಿಗೆ
ಕಷ್ಟವಾಯಿತು.



ಅನೇಕ ಸಂಗತಿಗಳು ಅರ್ಥವಾಗದಿದ್ದರೂ
ಸಹ ಅಬ್ರಹಾಮನು ದೇವರಲ್ಲಿ
ನಂಬಿಕೆಯಿಡುವುದನ್ನು ಕಲಿತ್ತಿದ್ದನು.



ಬೆಳಗಿನ ಜಾವ ತನ್ನ ಇಬ್ಬರು ಸೇವಕರೂಂದಿಗೆ
ಇಸಾಕನನ್ನು ಸರ್ವಾಂಗಹೋಮ
ಅರ್ಪಿಸಲು ಬೆಟ್ಟದ ಕಡೆಗೆ
ಹೋರಟರು.





ಹೊರಡುವುದಕ್ಕೆ ಮುಂಚೆ ಅಬ್ರಹಾಮನು ಸರ್ವಾಂಗಹೋಮಕ್ಕೆ
ಬೇಕಾಗುವ ಕಟ್ಟಿಗೆಯನ್ನು
ಸಿದ್ಧಮಾಡಿಕೊಂಡನು.
ದೇವರ ಆಜ್ಞೆಗೆ
ಅಬ್ರಹಾಮನು
ವಿಧೇಯನಾದನು.



ಮೂರು ದಿನಗಳ ನಂತರ
ಬೆಟ್ಟದ ಹತ್ತಿರ ಬಂದರು.
ಅಬ್ರಹಾಮನು ತನ್ನ ಸೇವಕರಿಗೆ
ನಾವು ಹೋಗಿ ದೇವರನ್ನು
ಆರಾಧಿಸಿಕೊಂಡು
ತಿರುಗಿ ಬರುವೆವೆಂದು
ಹೇಳಿದನು.

ಅಬ್ರಹಾಮನು

ಬೆಂಕಿ ಮತ್ತು ಕತ್ತಿಯನ್ನು,

ಇಸಾಕನು ಕಟ್ಟಿಗೆಯನ್ನು

ತೆಗೆದುಕೊಂಡನು.



ಸರ್ವಾಂಗ ಹೋಮಕ್ಕೆ ಬೇಕಾದ ಯಜ್ಞದ ಕುರಿ
ಎಲ್ಲಿ? ಎಂದು ಇಸಾಕನು ಕೇಳಿದಾಗ
ಅಬ್ರಹಾಮನು "ದೇವರೆ ತಾನೆ
ಅನುಗ್ರಹಿಸುವನೆಂದು"
ಹೇಳಿದನು.



ಅವರಿಬ್ಬರು ದೇವರು ನೇಮಿಸಿದ
ಸ್ಥಳಕ್ಕೆ ಬಂದು ಸರ್ವಾಂಗಹೋಮವನ್ನು
ಅರ್ಪಿಸಲು ಯಜ್ಞವೇದಿಯನ್ನು ಕಟ್ಟಿ
ಅದರ ಮೇಲೆ ಕಟ್ಟಿಗೆಯನ್ನು
ಹಾಕಿದರು.



ಅಬ್ರಹಾಮನು ತನ್ನ ಜೀವಿತದಲ್ಲಿ ಅನೇಕ ಯಜ್ಞವೇಧಿಗಳನ್ನು ಕಟ್ಟಿದ್ದನು. ಆದರೆ ನಿಜವಾಗಿಯೂ ಈ ಯಜ್ಞವೇದಿಯನ್ನು ಕಟ್ಟುವುದು ತುಂಬಾ ಕಷ್ಟವಾಗಿತ್ತು.



ಅಬ್ರಹಾಮನು ತನ್ನ ಪ್ರೀಯ ಮಗನಾದ ಇಸಾಕನನ್ನು ಕಟ್ಟಿ ಯಜ್ಞವೇದಿಯ ಮೇಲೀರಿಸಿದನು. ನಿಜವಾಗಿಯೂ ಅಬ್ರಹಾಮನು ತನ್ನ ಒಬ್ಬನೆ ಮಗನಾದ ಇಸಾಕನನ್ನು ದೇವರಿಗೆ ವಿಧೆಯನಾಗಿ

ಅರ್ಪಿಸುವನೋ?





ಹೌದು!
ಅಬ್ರಹಾಮನು
ತನ್ನ ಕತ್ತಿಯನ್ನು
ಇಸಾಕನ ಮೇಲೆ ಎತ್ತುವಾಗ
ಆತನ ಹೃದಯ ದು:ಖದಿಂದ
ತುಂಬಿರಬಹುದು, ಆದರೆ
ಅಬ್ರಹಾಮನು ದೇವರ ಆಜ್ಞೆಗೆ
ವಿಧೆಯನಾಗಲೆಬೇಕಿತ್ತು.



ನಿಲ್ಲಿಸು!
ಎಂದು ದೇವ
ದೂತನು ಕೂಗಿದನು
ನೀನು ನಿನ್ನ ಒಬ್ಬನೇ
ಮಗನನ್ನಾದರೂ
ನನಗೆ ...


... ಸಮರ್ಪಿಸುವದಕ್ಕೆ
ಹಿಂದೆಗೆಯಲಿಲ್ಲವಾದ್ದರಿಂದ
ನೀನು ದೇವರಲ್ಲಿ
ಭಯಭಕ್ತಿಯುಳ್ಳವನು
ಎಂದು ಈಗ
ತಿಳಿಯಿತು.


ಅಬ್ರಹಮನು ಪೊದೆಯಲ್ಲಿ ಟಗರನ್ನು
ನೋಡಿ, ಇಸಾಕನ ಬದಲಾಗಿ
ಕುರಿಮರಿಯನ್ನು ಹೋಮ
ಮಾಡಿದನು, ...



... ತರುವಾಯ ಇಸಾಕನು,
ನನ್ನ ತಂದೆ ಹೇಳಿದ ಪ್ರಕಾರವೆ
ದೇವರು ಒದಗಿಸಿದನು ಎಂದು
ತಿಳಿದುಕೊಂಡನು.

ಅಬ್ರಹಾಮನು ಮತ್ತು ತನ್ನ ಮಗ ಇಸಾಕನು ದೇವರನ್ನು
ಆರಾಧಿಸುತ್ತಿರುವಾಗ ದೇವದೂತನು ಅವರೊಂದಿಗೆ
ಮಾತನಾಡಿ ನೀನು ಆಜ್ಞೆಗೆ ವಿಧೇಯನಾದ್ದರಿಂದ
ನಿನ್ನ ಸಂತತಿಯವರು ಆಶೀರ್ವಧಿಸಲ್ಪಡುವರು.



ಮುಂದೊಂದು ದಿನ ಅಬ್ರಹಾಮನ ವಂಶಾವಳಿಯಿಂದ ಕ್ರಿಸ್ತನ ಜನನವಾಯಿತು.



ಅಬ್ರಹಾಮನು ಮತ್ತು ಇಸಾಕನು ಮನೆಗೆ ಹಿಂದಿರುಗಿದರು.



ಸ್ವಲ್ಪಕಾಲದ ನಂತರ ಅಬ್ರಹಾಮನು ತನ್ನ ಹೆಂಡತಿಯಾದ ಸಾರಳನ್ನು, ಇಸಾಕನು ತಾಯಿಯನ್ನು ಕಳೆದುಕೊಂಡು ದು:ಖದಲ್ಲಿ ಮುಳುಗಿದರು.



ಶವ ಸಂಸ್ಕಾರದ ನಂತರ,
ಅಬ್ರಹಾಮನು ತನ್ನ ಹಿರೀ
ಸೇವಕನ್ನು ಇಸಾಕನಿಗೆ ಹೆಂಡತಿಯನ್ನು
ಹುಡುಕಲು ಕಳುಹಿಸಿದನು.



ಅಬ್ರಹಾಮನ ಸಂಬಂದಿಕರಲ್ಲಿ ಇಸಾಕನಿಗೆ ಹೆಂಡತಿಯನ್ನು ಹುಡುಕಲು ಹೋರಟನು.



ಅಬ್ರಹಾಮನ ಸೇವಕನು ದೇವರಿಂದ ಒಂದು ಗುರುತನ್ನು (ಚಿನ್ಹೆಯನ್ನು) ಕೇಳಿದನು. ಊರಿನ ಹೆಣ್ಣುಮಕ್ಕಳಲ್ಲಿ ಯಾರು ನನ್ನ ಒಂಟೆಗೆ ಮತ್ತು ನನಗೆ ನೀರನ್ನು ಕೋಡುವವಳೂ?



ಅವಳೆ ಇಸಾಕನಿಗೆ ಆಯ್ದುಕೊಂಡವಳಾಗಿರಲಿ ಅಂದನು.

ತಕ್ಷಣದಲ್ಲಿ ರಿಬೆಕ್ಕಳು ನೀರಿನ್ನು ಸೇಧಿ ಕೊಟ್ಟಳು.



ಅವಳು ಅಬ್ರಹಾಮನ ಸಂಬಂಧಿಯಾಗಿದ್ದಳು, ಈ ಘಟನೆಯಿಂದ ಸೇವಕನು ತನ್ನ ಮನಸ್ಸಲ್ಲಿ ದೇವರು ತನ್ನ ಪ್ರಾರ್ಥನೆಗೆ ಉತ್ತರಕೊಟ್ಟನು ಎಂದು ತಿಳಿದುಕೊಂಡನು.



ಇಸಾಕನನ್ನು ಮದುವೆಯಾಗಲು ರೆಬೆಕ್ಕಳು ತನ್ನ ಕುಟುಂಬವನ್ನು ಬಿಟ್ಟು ಬಂದಳು.



ಅವಳು ತಾಯಿಯನ್ನು ಕಳೆದುಕೊಂಡ ಇಸಾಕನನ್ನು ಸಂತೈಸಿದಳು, ಇಸಾಕನು ಅವಳನ್ನು ಹೆಚ್ಚಾಗಿ ಪ್ರೀತಿಸಿದನು.



ದೇವರು ಅಬ್ರಹಾಮನ ಪ್ರೀತಿಯನ್ನು ಪರೀಕ್ಷಿಸಿದನು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಆದಿಕಾಂಡ 22 – 24

“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”
ಕೀರ್ತನೆ 119:130

ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು
ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು.
ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16